# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 92(96) |
| ಸದಸ್ಯರ ಹೆಸರು | : | ಶ್ರೀ ಕೆ.ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು). |
| ಉತ್ತರಿಸಬೇಕಾದ ದಿನಾಂಕ | : | 05-07-2023. |
| ಉತ್ತರಿಸುವ ಸಚಿವರು | : | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು. |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | 2020ನೇ ಸಾಲಿನಿಂದ ಈವರೆಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅನುದಾನದಲ್ಲಿ ಕೊರೆಯಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಗಂಗಾಕಲ್ಯಾಣ ಯೋಜನೆಯಡಿ 2020-21 ರಿಂದ 2022-23ನೇ ಸಾಲಿನವರೆಗೆ ಒಟ್ಟು 335 ಕೊಳವೆ ಬಾವಿಗಳನ್ನು ಕೊರೆಯಾಲಾಗಿರುತ್ತದೆ. |
| ಆ. | ಅವುಗಳಲ್ಲಿ ವಿಫಲವಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; | ಕೊರೆಯಲಾದ ಕೊಳವೆ ಬಾವಿಗಳಲ್ಲಿ ಯಾವುದೂ ವಿಫಲವಾಗಿರುವುದಿಲ್ಲ. |
| ಇ. | ಕೊರೆಯಲಾದ ಎಲ್ಲಾ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ, ಪಂಪ್ ಸೆಟ್‌ಗಳನ್ನು ಅಳವಡಿಸಿ ಯೋಜನೆಯನ್ನು ಪೂರ್ಣಗೊಳಿಸಲಾಗಿದೆಯೇ; (ಅಂಕಿ-ಅಂಶಗಳೊಂದಿಗೆ ವಿವರ ನೀಡುವುದು) | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಗಂಗಾಕಲ್ಯಾಣ ಯೋಜನೆಯಡಿ ದಿನಾಂಕ:15-02-2023ರಿಂದ ಕೊಳವೆಬಾವಿ ಕೊರೆಯುವ ಕಾರ್ಯವು ಪ್ರಾರಂಭಿಸಲಾಗಿದ್ದು, ಚುನಾವಣಾ ನೀತಿ ಸಂಹಿತೆಯು ದಿನಾಂಕ:29-03-2023 ರಿಂದ 16-04-2023ರವರೆಗೆ ಜಾರಿಯಲ್ಲಿದ್ದು,ಕೊಳವೆ ಬಾವಿಗಳನ್ನು ಕೊರೆಯುವ ಕಾರ್ಯವು ತಡೆಹಿಡಿಯಲಾಗಿತ್ತು. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಆಇ 1 ಟಿಎಫ್ 2023 ದಿನಾಂಕ:22-05-2023ರ ಆದೇಶದನ್ವಯ ಸರ್ಕಾರದ ಎಲ್ಲಾ ಇಲಾಖೆಗಳು/ನಿಗಮಗಳು/ ಮಂಡಳಿ/ಪ್ರಾಧಿಕಾರಗಳ ಹಿಂದಿನ ಕಾಮಗಾರಿಗಳನ್ನು ಮತ್ತು ಪಾವತಿಗಳನ್ನು ತಡೆಹಿಡಿಯಲಾಗಿರುತ್ತದೆ. ಆದುದರಿಂದ ಯಾವುದೇ ವಿದ್ಯುತ್ ಸಂಪರ್ಕ, ಪಂಪು ಮೋಟಾರುಗಳ ಅಳವಡಿಕೆ ಪ್ರಗತಿ ಸಾಧ್ಯವಾಗಿರುವುದಿಲ್ಲ. |
| ಈ. | ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಕೊರೆಯಲಾದ ಕೊಳವೆ ಬಾವಿಗಳಲ್ಲಿ ಅಕ್ರಮ ನಡೆದಿರುವ ಬಗ್ಗೆ ದೂರು ದಾಖಲಾಗಿದೆಯೇ; ಹಾಗಿದ್ದಲ್ಲಿ, ಈ ಕುರಿತಂತೆ ಸದರಿ ದೂರುಗಳ ಬಗ್ಗೆ ಸರ್ಕಾರ ಜರುಗಿಸಿದ ಕ್ರಮಗಳೇನು; | ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಕೊರೆಯಲಾದ ಕೊಳವೆ ಬಾವಿಗಳಲ್ಲಿ ಅಕ್ರಮ ನಡೆದಿರುವ ಬಗ್ಗೆ ಯಾವುದೇ ದೂರು ದಾಖಲಾಗಿರುವುದಿಲ್ಲ. |

| | | |
|---|---|---|
| ಉ. | ಸದರಿ ಯೋಜನೆಯಡಿ ಅಕ್ರಮವೆಸಗಿರುವ ಏಜೆನ್ಸಿಗಳನ್ನು ಕಪ್ಪುಪಟ್ಟಿಗೆ ಸೇರಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮಕೈಗೊಳ್ಳುವುದೇ? (ವಿವರ ನೀಡುವುದು) | ಉದ್ಭವಿಸುವುದಿಲ್ಲ. |

ಸಂಖ್ಯೆ: **MWD 51 LMQ 2023**

**(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು